# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ನೋಂದಾಯಿತ ಕಛೇರಿ
(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಆಲೂರು
ದೂ.ಸಂ. 081702-218233
E.Mail : aeealur@gmail.com

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಆಲೂರು/2018-19/ 2159-60 ದಿನಾಂಕ : 31-01-19

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ-24.01.2019 ರ ಸೋಮವಾರ ದಂದು ಶ್ರೀ ಜಗದೀಶ್ ಕಾರ್ಯಪಾಲಕ ಇಂಜಿನಿಯರ್ (ವಿ)ಸಕಲೇಶಪುರ ವಿಭಾಗ ರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

1. ಶ್ರೀ ಜಗದೀಶ್ ಕಾರ್ಯಪಾಲಕ ಇಂಜನಿಯರ್ (ವಿ)ಸಕಲೇಶಪುರ ವಿಭಾಗ
2. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ (ವಿ) ಆಲೂರು ಉಪವಿಭಾಗ
3. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ
4. ಶ್ರೀ ಸದಾಶಿವ ,ಲೆಕ್ಕಾಧಿಕಾರಿ (ಆಂ.ಪ), ಸಕಲೇಶಪುರ ವಿಭಾಗ
5. ಶ್ರೀಮತಿ ಬಿಂದು ಸಹಾಯಕ ಇಂಜನಿಯರ್(ತಾಂತ್ರಿಕ) ಆಲೂರು ಉಪವಿಭಾಗ
6. ಶ್ರೀ ಅಬ್ದುಲ್, ಕಿರಿಯ ಇಂಜನಿಯರ್ (ವಿ) ಪಾಳ್ಯ ಶಾಖೆ.
7. ಶ್ರೀ ನಾಗರಾಜು ಕಿರಿಯ ಇಂಜನಿಯರ್ (ವಿ) ಆಲೂರು ಶಾಖೆ.
8. ಕುಮಾರಿ.ಲಕ್ಷ್ಮೀ ಹಿರಿಯ ಸಹಾಯಕರು, ಕಂದಾಯ ಶಾಖೆ.ಆಲೂರು.

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ,ಸ್ವಾಗತಿಸುವ ಮೂಲಕ ಸಭೆಯನ್ನು 11:00 ಗಂಟೆಗೆ ಪ್ರಾರಂಭ ಮಾಡಿದರು.

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.**

1) ಶ್ರೀ ದ್ಯಾವಮ್ಮ ಕೋ/೦ ಜವರೇಗೌಡ.ಉಮಾದೇವರಹಳ್ಳಿ ರವರು ಹಾಲಿ ಇರುವ 63.ಕೆ.ವಿ.ಎ. ಪರಿವರ್ತಕಕ್ಕೆ 12 ಅಧಿಕೃತ ಐ.ಪಿ. ಸ್ಥಾವರಗಳಿದ್ದು ವೋಲ್ಟೇಜ್ ಕಡಿಮೆಯಿರುವುದರಿಂದ ಹೊಸ ಪರಿವರ್ತಕ ಅಳವಡಿಸಿ ಕೊಡಬೇಕೆಂದು ಕೋರಿದರು.

ಸಭೆಯ ಅಧ್ಯಕ್ಷರು ಯು.ಎನ್.ಐ.ಪಿ ಯೋಜನೆ ಅಡಿಯಲ್ಲಿ ಜೇಷ್ಠತೆ ಆಧಾರದ ಮೇರೆಗೆ ಹೊಸ ಪರಿವರ್ತಕ ಅಳವಡಿಸಲು ಅಂದಾಜು ತಯಾರಿಸಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು.

2) ಸಿಂಗಾಪುರ ಮತ್ತು ಮಗೆಹಳ್ಳಿ ಗ್ರಾಮಸ್ಥರು ಗ್ರಾಮಕ್ಕೆ ಸಮರ್ಪಕವಾಗಿ ವಿದ್ಯುತ್ ದೊರೆಯುತ್ತಿಲ್ಲವಾದ್ದರಿಂದ ವಿದ್ಯುತ್ ಮಾರ್ಗ ಬದಲಾವಣೆ ಮಾಡಲು ಕೋರಿದರು.

ಸಭೆಯ ಅಧ್ಯಕ್ಷರು ಪಾಳ್ಯ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕೂಡಲೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

3) ಶ್ರೀ ರವಿ. ಬಿನ್ ರಾಜಕುಮಾರ ,ಉಮಾದೇವರಹಳ್ಳಿ ರವರು AL23707 ರವರ ಮನೆ ಪಕ್ಕ ಕಂಬದಲ್ಲಿ ಕಂಬದ ರಾಡುಗಳು ಕಾಣುತ್ತಿದ್ದು ಕಂಬ ಬೀಳುವ ಸ್ಥಿತಿಯಲ್ಲಿವೆ ಅದನ್ನು ಬದಲಯಿಸುವಂತೆ ಕೋರಿದರು

ಸಭೆಯ ಅಧ್ಯಕ್ಷರು ಎಲ್ಲಾ ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

4) ಗೇಕರವಳ್ಳಿ, ವಾಜರವಳ್ಳಿ ಮತ್ತು ಗೊಲ್ಲರ ತಿಮ್ಮನಹಳ್ಳಿ ಗ್ರಾಮಸ್ಥರು ವಿದ್ಯುತ್ ತಂತಿಗಳು ಬಾಗಿದ್ದು ಮತ್ತು ಕಂಬ ಬೀಳುವ ಸ್ಥಿತಿಯಲ್ಲಿವೆ ಅದನ್ನು ಕೊಡಲೆ ಬದಲಾಯಿಸುವಂತೆ ಕೋರಿದರು

ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

5) ಶ್ರೀಕೆ.ವಿ.ಮಲ್ಲಿಕಾರ್ಜುನ ಬಿನ್ ಕೆ.ವಿ.ವೀರೇಗೌಡ, ಆಲೂರು ರವರ DKIP-34 ಐ.ಪಿ. ಸ್ಥಾವರವಿದ್ದು ವೋಲ್ಟೇಜ್ ಕಡಿಮೆಯಿರುವುದರಿಂದ ಮೋಟಾರ್ ಸುಟ್ಟು ಹೋಗುತ್ತಿದ್ದು ವೋಲ್ಟೇಜ್ ಸಮಸ್ಯೆ ಬಗೆಹರಿಸುವಂತೆ ಕೋರಿದರು.

Scanned by CamScanner

ಸಭೆಯ ಅಧ್ಯಕ್ಷರು ಈಗಾಗಲೇ ಹೊಸ ವಿ.ವಿ.ಕೇಂದ್ರಕ್ಕೆ ಅನುಮೋದನೆ ನೀಡಿದ್ದು ವೋಲ್ಟೇಜ್ ಸಮಸ್ಯೆ ನೂತನ ವಿ.ವಿ.ಕೇಂದ್ರ ಸ್ಥಾಪಿಸಿದ ನಂತರ ಸಮಸ್ಯೆ ಬಗೆಹರಿಯುತ್ತದೆ ಎಂದು ತಿಳಿಸಿದರು.

6) ಶ್ರೀ ಕೆ.ಜಗದೀಶ ಬಿನ್ ಕೆಂಚೇಗೌಡ,ದೊಡ್ಡಕಣಗಾಲ್ ಕಾತೂರು ಫೀಡರ್ ನ ವೋಲ್ಟೇಜ್ ಕಡಿಮೆಯಿರುವುದರಿಂದ ಪಂಪ್ ಸೆಟ್ ಗಳು ನೀರು ಮೇಲೆ ಎತ್ತುತ್ತಿಲ್ಲ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷರು ಈಗಾಗಲೇ ಹೊಸ ವಿ.ವಿ.ಕೇಂದ್ರಕ್ಕೆ ಅನುಮೋದನೆ ನೀಡಿದ್ದು ವೋಲ್ಟೇಜ್ ಸಮಸ್ಯೆ ನೂತನ ವಿ.ವಿ.ಕೇಂದ್ರ ಸ್ಥಾಪಿಸಿದ ನಂತರ ಸಮಸ್ಯೆ ಬಗೆಹರಿಯುತ್ತದೆ ಎಂದು ತಿಳಿಸಿದರು.

7)ಶ್ರೀ ರಾಜಶೇಖರ,ಕೆಂಚಮ್ಮ ಮತ್ತು ಆನಂದ ಸಿ.ಹೊಸಳ್ಳಿ ರವರ ಅಧಿಕೃತ ಐ.ಪಿ.ಸ್ಥಾವರಕ್ಕೆ ವೋಲ್ಟೇಜ್ ಕಡಿಮೆಯಿರುವುದರಿಂದ ಹೊಸ ಪರಿವರ್ತಕ ಅಳವಡಿಸಿ ಕೊಡಬೇಕೆಂದು ಕೋರಿದರು.

ಸಭೆಯ ಅಧ್ಯಕ್ಷರು ಯು.ಎನ್.ಐ.ಪಿ ಯೋಜನೆ ಅಡಿಯಲ್ಲಿ ಜೇಷ್ಠತೆ ಆಧಾರದ ಮೇರೆಗೆ ಹೊಸ ಪರಿವರ್ತಕ ಅಳವಡಿಸಲು ಅಂದಾಜು ತಯಾರಿಸಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು

8) ಸಿದ್ದಾಪುರ ಗ್ರಾಮಸ್ಥರು ಶ್ರೀ ಬಸವಣ್ಣ ದೇವಸ್ಥಾನದ ಮುಂದೆ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ನೀಡಿರುವ ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಿ ಕೊಡುವಂತೆ . ಕೋರಿದರು.

ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಕೂಡಲೇ ಸುಟ್ಟು ಹೋಗಿರುವ ಪರಿವರ್ತಕ ಬದಲಾಯಿಸುವಂತೆ ಸೂಚಿಸಿದರು.

9)ದಿನೇಶ್ ,ಹುಲ್ಲಹಳ್ಳಿ : ರವರು 100ಕೆ.ವಿ.ಎ.ಪರಿವರ್ತಕ ಸುಟ್ಟು ಹೋಗಿದ್ದು ಬದಲಾಯಿಸಿ ಕೊಡುವಂತೆ . ಕೋರಿದರು.

ಸಭೆಯ ಅಧ್ಯಕ್ಷರು ಆಲೂರು ಶಾಖಾಧಿಕಾರಿಗಳಿಗೆ ಕೂಡಲೇ ಸುಟ್ಟು ಹೋಗಿರುವ ಪರಿವರ್ತಕ ಬದಲಾಯಿಸುವಂತೆ ಸೂಚಿಸಿದರು.

10)ಯು.ಎಲ್.ಕಾಂತರಾಜ್ ಅರಸ್ ,ಉಮಾದೇವರಹಳ್ಳಿ ರವರು ಕೃಷಿ ಪಂಪ್‌ಸೆಟ್‌ಗಳಿಗೆ ವೋಲ್ಟೇಜ್ ಕಡಿಮೆಯಿದ್ದು ಸಮಸ್ಯೆ ಬಗೆಹರಿಸುವಂತೆ ಕೋರಿದರು ಹಾಗೂ ಹಲವು ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಜ್ಯೋತಿ ಮೇಲೆ ವಿದ್ಯುತ್ ಸಂಪರ್ಕ ಮಾಡುತ್ತಿದ್ದು ನಮ್ಮ ಕೃಷಿ ಪಂಪ್‌ಸೆಟ್‌ಗಳಿಗೂ ಸಹ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು. ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆಯಲ್ಲಿ ಮನೆಗಳಿಗೆ ಇನ್ನು ಮೀಟರ್ ಅಳವಡಿಸಿರುವುದಿಲ್ಲ ಎಂದು ತಿಳಿಸಿದರು. ಉಮಾದೇವರಹಳ್ಳಿ ರಸ್ತೆ ಬದಿಯ ಪರಿವರ್ತಕ ಬದಲಾಯಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಈಗಾಗಲೇ ಹೊಸ ವಿ.ವಿ.ಕೇಂದ್ರಕ್ಕೆ ಅನುಮೋದನೆ ನೀಡಿದ್ದು ವೋಲ್ಟೇಜ್ ಸಮಸ್ಯೆ ನೂತನ ವಿ.ವಿ.ಕೇಂದ್ರ ಸ್ಥಾಪಿಸಿದ ನಂತರ ಸಮಸ್ಯೆ ಬಗೆಹರಿಯುತ್ತದೆ ಎಂದು ತಿಳಿಸಿದರು. ಉಮಾದೇವರಹಳ್ಳಿ ರಸ್ತೆ ಬದಿಯ ಪರಿವರ್ತಕ ಪಕ್ಕದ ಬದಲಾಯಿಸಲು ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯ ಅಧ್ಯಕ್ಷರು ಉಪವಿಭಾಗದ ಪ್ರಾತಿಯಲ್ಲಿರುವ **IPDS**, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ, ಗಂಗಾ ಕಲ್ಯಾಣ ಮತ್ತು **UNIP** ಯ ಪ್ರಗತಿಯ ಬಗ್ಗೆ ಚರ್ಚಿಸಿದರು.

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿ/ ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು 2.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪವಿಭಾಗ,ಸೆಸ್ಕ್,ಆಲೂರು.

<u>ಪ್ರತಿಗಳನ್ನು, ಗೌರವಪೂರ್ವಕವಾಗಿ:-</u>

1) ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ. ಹಾಸನರವರ ದಯಾ ಗಮನಕ್ಕೆ ಸಲ್ಲಿಸಿದೆ.
2) ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ. ಸಕಲೇಶಪುರ ರವರ ದಯಾ ಗಮನಕ್ಕೆ ಸಲ್ಲಿಸಿದೆ.
3) ಲೆಕ್ಕಾಧಿಕಾರಿ (ಆಂ.ಪ) ಹಾಸನ ವಿಭಾಗ.
4) ಲೆಕ್ಕಾಧಿಕಾರಿ ಸಕಲೇಶಪುರ ವಿಭಾಗೀಯ ಕಛೇರಿ
5) ಶಾಖಾಧಿಕಾರಿಗಳು, ಆಲೂರು, ಮಗ್ಗೆ ಮತ್ತು ಪಾಳ್ಯ ಶಾಖೆ ರವರಿಗೆ
6) ಕಛೇರಿ ಪ್ರತಿ.

Scanned by CamScanner